ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ಬೆಂಗಳೂರು –560098

ಸಂಖ್ಯೆ : ಮು.ಅ/ರಾರಾನವ/ಪಿ.ಆರ್/370/2022-23 ದಿನಾಂಕ : 18/6/2022

ಸ್ಥಳ ಪರಿಶೀಲನಾ ವರದಿ

ವಿಷಯ:– **Comprehensive Development of Roads, Drains and footpath in HMT Layout, SBM Colony and Surrounding areas in Ward No.17 Under Package-2019-20 RRN Div-(10)** ಕಾಮಗಾರಿಗೆ ಸಂಬಂಧಪಟ್ಟ ಅಭಿಯಂತರರೊಡನೆ ಸ್ಥಳ ಪರಿಶೀಲನೆ ನಡೆಸಿರುವ ಬಗ್ಗೆ.

****

ಹಾಜರಿದ್ದ ಅಧಿಕಾರಿಗಳು:

1. ಕಾ.ಪಾ.ಅ(ರಾರಾನಗರ) ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ಉಪವಿಭಾಗ
3. ಸಹಾಯಕ ಅಭಿಯಂತರರು, ವಾರ್ಡ್ ನಂ.37

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019–20ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಪಿ–3744ರಡಿ ಮೇಲ್ಕಂಡ ಕಾಮಗಾರಿಯು ಅನುಮೋದನೆಗೊಂಡಿರುತ್ತದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.1100.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಯು ವಾರ್ಡ್ ನಂ.17ರ ವ್ಯಾಪ್ತಿಯಲ್ಲಿ ಅಡ್ಡರಸ್ತೆಗಳಿಗೆ ರೋಡ್ ಸ್ಪಡ್ಸ್‌ಗಳನ್ನು ಅಳವಡಿಸುವ ಕಾಮಗಾರಿಯಾಗಿರುತ್ತದೆ.

ಮುಂದುವರೆದು, ಕಾಮಗಾರಿಯು ಪ್ರಾರಂಭಗೊಂಡು ಪ್ರಗತಿಯಲ್ಲಿರುವ ಸಂದರ್ಭದಲ್ಲಿ ಮಾನ್ಯ ಸಚಿವರು ಹಾಗೂ ಸ್ಥಳೀಯ ಶಾಸಕರಾದ ಶ್ರೀ.ಮುನಿರತ್ನ ರವರು ಕಾಮಗಾರಿ ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ವಾರ್ಡ್ ವ್ಯಾಪ್ತಿಯ ಅಡ್ಡರಸ್ತೆಗಳಿಗೆ ರೋಡ್ ಸ್ಪಡ್ಸ್‌ಗಳನ್ನು ಅಳವಡಿಸುವ ಮತ್ತು ರೋಡ್ ಮಾರ್ಕಿಂಗ್ ಮಾಡುವ ಕಾಮಗಾರಿಯ ಬದಲಾಗಿ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇರುವುದರಿಂದ ಬೋರ್‌ವೆಲ್ ಕೊರೆಸುವ ಕಾಮಗಾರಿ ಹಾಗೂ ಸದರಿ ರಸ್ತೆಗಳಲ್ಲಿ ಈಗಾಗಲೇ ಹಾಳಾಗಿರುವ ಕಲ್ವರ್ಟ್‌ಗಳನ್ನು ದುರಸ್ಥಿಗೊಳಿಸುವ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಅದರಂತೆ, ಕಾಮಗಾರಿಗೆ ಸಂಬಂಧಿಸಿದ ಅಭಿಯಂತರರೊಡನೆ ಸ್ಥಳ ಪರಿಶೀಲನೆ ಕೈಗೊಂಡು ಮಾನ್ಯ ಶಾಸಕರು ಸೂಚಿಸಿರುವಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇರುವುದರಿಂದ ಬೋರ್‌ವೆಲ್ ಕೊರೆಸುವ ಕಾಮಗಾರಿ ಹಾಗೂ ಸದರಿ ರಸ್ತೆಗಳಲ್ಲಿ ಈಗಾಗಲೇ ಹಾಳಾಗಿರುವ ಕಲ್ವರ್ಟ್‌ಗಳನ್ನು ದುರಸ್ಥಿಗೊಳಿಸುವ ಕಾಮಗಾರಿಗೆ ಅವಶ್ಯಕವಿರುವ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಅನುಮೋದಿತ ಮೂಲ ಅಂದಾಜು ಪಟ್ಟಿಯ ಮೊತ್ತದಲ್ಲಿ ಸೀಮಿತವಾಗಿರುವಂತೆ ಹಾಗೂ ಪಾಲಿಕೆಗೆ ಯಾವುದೇ ರೀತಿಯ ಹೆಚ್ಚಿನ ಆರ್ಥಿಕ ಹೊರೆ ಇಲ್ಲದಿರುವಂತೆ ಸ್ಥಳಕ್ಕನುಗುಣವಾಗಿ ಅಂದಾಜು ಪಟ್ಟಿಯಲ್ಲಿ ಮಾರ್ಪಾಡು ಮಾಡಿಕೊಂಡು ಅನುಮೋದನೆ ಪಡೆಯಲು ಕಾರ್ಯಪಾಲಕ ಅಭಿಯಂತರರು(ರಾರಾನಗರ) ವಿಭಾಗ ರವರಿಗೆ ಸೂಚಿಸಿದೆ.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿ ನಗರವಲಯ, ಬಿಬಿಎಂಪಿ

ಪ್ರತಿಯನ್ನು:

1. ಕಾರ್ಯಪಾಲಕ ಅಭಿಯಂತರರು(ರಾರಾನಗರ) ವಿಭಾಗ ರವರ ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಕಡತಕ್ಕೆ.

Scanned with CamScanner